ದಿನಾಂಕ : 26.02.2024

ಅಸಲು ದಾವೆ: 101/2021

ಪಿ.ಡಬ್ಲ್ಯೂ: 3

ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು : 3 ನೇ ಪ್ರತಿವಾದಿ ಪರ ವಕೀಲರಾದ ಶ್ರೀ ಎಂ.ಜೆ.ಎಸ್. ರವರಿಂದ :**

ನಾನು ಬಿ.ಇ. ಓದಿರುತ್ತೇನೆ. ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತು. ವಾದ ಪತ್ರದಲ್ಲಿ ಹೇಳಿರುವ ವಿಚಾರಗಳು ಗೊತ್ತು. 1 ನೇ ಪ್ರತಿವಾದಿ ನನ್ನ ಅಜ್ಜಿ. 2 ನೇ ಪ್ರತಿವಾದಿ ನನ್ನ ತಂದೆ. 3 ನೇ ಪ್ರತಿವಾದಿ ನನ್ನ ಚಿಕ್ಕಪ್ಪ. ಗೌರಮ್ಮ ನನ್ನ ಅಜ್ಜಿ ಎಂದರೆ ಸರಿ. 4 ನೇ ಪ್ರತಿವಾದಿ ನನ್ನ ತಾತ ಸಿದ್ದೇಗೌಡರವರ ಹೆಂಡತಿ ಎಂದರೆ ನನಗೆ ಗೊತ್ತಿಲ್ಲ. 4 ನೇ ಪ್ರತಿವಾದಿ ಎಲ್ಲಿ ವಾಸ ಎಂದರೆ ನನಗೆ ಗೊತ್ತಿಲ್ಲ. ವಾದ ಪತ್ರದಲ್ಲಿ ತೋರಿಸಿರುವ ವಿಳಾಸದ ವಿವರಗಳನ್ನು ನನ್ನ ತಾಯಿ ವಕೀಲರಿಗೆ ಮಾಹಿತಿ ಕೊಟ್ಟಿರುತ್ತಾರೆ. ವಾದ ಪತ್ರದ ಮಾಹಿತಿಗಳನ್ನು ನನ್ನ ತಾಯಿ ವಕೀಲರಿಗೆ ಕೊಟ್ಟಿರುತ್ತಾರೆ ಎಂದರೆ ಸಾಕ್ಷಿಯು ಕೆಲವೊಂದನ್ನು ನನ್ನ ತಾಯಿ ಕೊಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ನನ್ನ ತಾಯಿ ದಾವೆಯಲ್ಲಿ ಪಾರ್ಟಿಯಾಗಿರುವುದಿಲ್ಲ ಎಂದರೆ ಸರಿ. ನಾನು ನನ್ನ ತಂದೆ ತಾಯಿ ಮತ್ತು ನನ್ನ ಅಜ್ಜಿ ತಿಮ್ಮಮ್ಮ ಅವರ ಜೊತೆ ವಾಸವಾಗಿರುತ್ತೇನೆ. ದಾವೆ ಹೂಡಿರುವ ಬಗ್ಗೆ 1 ಮತ್ತು 2 ನೇ ಪ್ರತಿವಾದಿಗೆ ಗೊತ್ತಿದೆ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ಕಾಲಾವಕಾಶ ಕೋರಿದ್ದು, ಸಮಯ ನೀಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ ಸರಿ ಇದೆ

ಹಿರಿಯ ಸಿವಿಲ್ ನ್ಯಾಯಾಧೀಶರು
ಮದ್ದೂರು.